ತರಗತಿಯಲ್ಲಿ ನನ್ನ ಪ್ರಯೋಗಗಳು

ಪೂರ್ವಾ ಅಗರ್‌ವಾಲ್

ಶಾಲಾ ವ್ಯವಸ್ಥೆಯಲ್ಲಿ ಬಹಳಷ್ಟು ಸಲ ಪ್ರಕ್ರಿಯೆ (Process) ಗಿಂತಲೂ ಹೆಚ್ಚು ಉತ್ಪನ್ನ (Product)ಕ್ಕೆ ಮಾನ್ಯತೆ ಸಿಗುತ್ತದೆ. ಆಗ ಅಂತಿಮ ಪರೀಕ್ಷಾ ಪತ್ರಿಕೆಯು ಪ್ರಗತಿ (Progress)ಯ ದಾಖಲೆಯಾಗುವುದರ ಬದಲಿಗೆ ಸಾಮರ್ಥ್ಯ (Capability)ದ ದಾಖಲೆಯಾಗುತ್ತದೆ. ಕೆಲವೊಮ್ಮೆ ಸಾಧ್ಯತೆಗಳನ್ನು ತಪ್ಪಾಗಿ ಪ್ರಭಾವಿಸಬಹುದು ಮತ್ತು ಮಂಕಾಗಿಸಬಹುದು. ಒಂದು ಮಗು ಸರಿಯಾಗಿ ಓದದಿದ್ದರೆ, ನಾವು ಮಗುವಿಗೆ ಓದಲು ಆಗುತ್ತಿಲ್ಲ ಎಂದು ಹೇಳುತ್ತೇವೆ. ಸಾಮರ್ಥ್ಯದ ಕುರಿತ ಪೋಷಕರು ಮತ್ತು ಶಿಕ್ಷಕರ ನಂಬಿಕೆಯನ್ನು ಆಧರಿಸಿ ಬಹುತೇಕ ಬಾರಿ ಈ ರೀತಿಯ ತಪ್ಪು ನಿರ್ಧಾರವನ್ನು ತಾಳಲಾಗುತ್ತದೆ. ಕೆಲವು ಮಕ್ಕಳಿಗೆ ಓದಲು ಬರುವುದಿಲ್ಲ ಎಂಬ ನಂಬಿಕೆ ಇರಬಹುದು ಅಥವಾ ಕೆಲವು ಮಕ್ಕಳಿಗೆ ಒಂದು ನಿರ್ದಿಷ್ಟ ವಿಷಯವನ್ನು ನಿರ್ದಿಷ್ಟ ರೀತಿಯಲ್ಲಿ ಕಲಿಯಲು ಆಗದಿರಬಹುದು ಅಥವಾ ಕೆಲವು ಮಕ್ಕಳಿಗೆ ಕಲಿಯಲು ಇಷ್ಟ ಇರದೇ ಇರಬಹುದು ಎಂಬ ರೀತಿಯ ನಂಬಿಕೆಗಳನ್ನು ಅವರು ಹೊಂದಿರಬಹುದು.

ಅಂತಹ ಯಾವುದೇ ನಂಬಿಕೆಗಳಿಗೆ ನಾನು ಜೋತುಬಿದ್ದಿಲ್ಲ. ಕನಿಷ್ಠ ಆ ನಂಬಿಕೆಗಳೂ ನನ್ನಲ್ಲಿಲ್ಲ. ನಾನು ಅಜೀಂ ಪ್ರೇಮ್‌ಜಿ ವಿಶ್ವ-ವಿದ್ಯಾಲಯದಲ್ಲಿ ಶಿಕ್ಷಣ ವಿಷಯದಲ್ಲಿ ಎಂಎ ಓದುತ್ತಿದ್ದಾಗ ಹೊಂದಿದ್ದ ಮಕ್ಕಳ ಕಲಿಕಾ ಅಸಾಮರ್ಥ್ಯದ ಕುರಿತ ನಂಬಿಕೆಗಳನ್ನು ನಾನು ನಿರಂತರವಾಗಿ ಪ್ರಶ್ನಿಸಿಕೊಂಡೇ ಬಂದಿದ್ದೇನೆ. ಎರಡು ವರ್ಷಗಳ ಕಾಲ ಮಕ್ಕಳ ಬೆಳವಣಿಗೆಯ ಬಗ್ಗೆ-ಅದರಲ್ಲಿಯೂ ಮಕ್ಕಳು ಏಕೆ ಕಲಿಯುವುದಿಲ್ಲ ಅಥವಾ ಕಲಿಯಲು ಹಿಂಜರಿಯುತ್ತಾರೆ ಎಂಬ ಬಗೆಗೆ ಇರುವ ವಿವಿಧ ದೃಷ್ಟಿಕೋನಗಳನ್ನು ನಾನು ಕಲಿತೆ. ಇತ್ತೀಚೆಗಂತೂ ಮಕ್ಕಳು ಏಕೆ ಕಲಿಯುವುದಿಲ್ಲ ಅಥವಾ ಕಲಿಯಲು ವಿಫಲರಾಗುತ್ತಾರೆ ಎಂಬುದರ ಬಗ್ಗೆಯೇ ಹೆಚ್ಚಿನ ಗಮನ ನೀಡಲಾಗುತ್ತಿದೆ. ಆದರೆ ಮಕ್ಕಳಿಗೆ ಕಲಿಯಲು ಆಗುವುದಿಲ್ಲ ಎಂಬುದನ್ನು ಮಾತ್ರ ನಾನು ನಂಬುವುದಿಲ್ಲ.

ಆದರೂ, ಪ್ರತಿಯೊಬ್ಬ ಮಕ್ಕಳು ಕಲಿಯಬಲ್ಲರು ಎಂಬ ದೃಢವಾದ ನಂಬಿಕೆ ಹೊಂದಿದ ಸದುದ್ದೇಶವುಳ್ಳ ಶಿಕ್ಷಣ ವ್ಯವಸ್ಥೆಯ ಭಾಗಿದಾರರಿಗೂ ಕೂಡಾ ಕೆಲವೊಮ್ಮೆ ಈ ನಂಬಿಕೆಯನ್ನು ಅನುಷ್ಠಾನಗೊಳಿಸಲು ಕಷ್ಟವಾಗುವುದುಂಟು. ಕೆಲವೊಮ್ಮೆ ಯಾವುದನ್ನು ಮಾಡುವುದು 'ಸಾಧ್ಯವಿಲ್ಲ'ವೋ ಅದನ್ನು 'ಸಾಧ್ಯ' ಮಾಡಲು ನಮ್ಮಲ್ಲಿ ಅಗತ್ಯ ಸಾಧನಗಳು ಇರುವುದಿಲ್ಲ. ಕೆಲವೊಮ್ಮೆ ಮಕ್ಕಳ ಪರಿಸ್ಥಿತಿಯ ಬಗ್ಗೆ ನಮ್ಮಲ್ಲಿ ಸಾಕಷ್ಟು ಒಳನೋಟಗಳು ಇರುವುದಿಲ್ಲ. ಆದ್ದರಿಂದ ನಾವು ಮಕ್ಕಳ ಕಲಿಕೆಗೆ ಸಂಬಂಧಪಟ್ಟ ಸಮಸ್ಯೆಯ ತಳಮಟ್ಟಕ್ಕೆ ಹೋಗಿ ಅದನ್ನು ಪರಿಹರಿಸಲು ಸಾಧ್ಯವಾಗದೇ ಇರಬಹುದು. ಹೀಗಾಗಿ ಮಕ್ಕಳಿಗೆ ಹೇಳಿಕೊಟ್ಟ ವಿಷಯವನ್ನು ಕಲಿಯಲು ಬರುವುದಿಲ್ಲ ಎಂದು ತಪ್ಪು ನಿರ್ಧಾರಕ್ಕೆ ಬಂದುಬಿಡುತ್ತೇವೆ. ಕಲಿಕೆಗೆ ಸಂಬಂಧಪಟ್ಟಂತೆ ಮಕ್ಕಳೊಡನೆ ಶಾಲೆಯ ಒಳಗೆ ಮತ್ತು ಹೊರಗೆ ನಾನು ಅನೇಕ ಪದ್ಧತಿಗಳನ್ನು ಅಳವಡಿಸಿದ್ದೇನೆ, ಅವುಗಳಲ್ಲಿ ಕೆಲವನ್ನು ತರಗತಿಯಲ್ಲಿಯೂ ಅಳವಡಿಸಿಕೊಂಡಿದ್ದೇನೆ.

ಈ ಲೇಖನದಲ್ಲಿ ಅಂತಹ ಕೆಲವು ಪದ್ಧತಿಗಳ ಬಗ್ಗೆ ತಿಳಿಸಲಿದ್ದೇನೆ. ಪ್ರತಿ ಮಗುವನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಒಳಗೂಡಿಸಿಕೊಳ್ಳುವುದು ಮತ್ತು ಪ್ರತಿ ಮಗುವೂ ಕಲಿಯುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ಖಾತರಿಪಡಿಸಿ-ಕೊಳ್ಳುವುದೇ ಇದರ ಉದ್ದೇಶ.

ಗುಂಪು ರಚನೆ ಮತ್ತು ವಿಭಿನ್ನ ಕಲಿಕೆ

ವಿಭಿನ್ನ ಹಾಗೂ ಕ್ರಿಯಾಶೀಲ ಮಾರ್ಗಗಳ ಮೂಲಕ ಮಕ್ಕಳ ಗುಂಪು ರಚಿಸಿ ಕಲಿಸುವುದು, 'ಎಲ್ಲರಿಗೂ ಒಂದೇ ಶೈಲಿ' ಎಂಬ ಸಿದ್ಧ-ಸೂತ್ರಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಎಲ್ಲರಿಗೂ ಒಂದು ಶೈಲಿಯನ್ನು ಪಾಲಿಸುವುದರಿಂದ ಯಾವುದೋ ಮಗುವಿಗೆ ನಷ್ಟವಾದೀತು. ಗುಂಪಿನಲ್ಲಿ ಕೆಲಸ ಕೊಡುವಾಗ ಪ್ರತಿ ಗುಂಪೂ ಬೇರೆಬೇರೆ ರೀತಿಯಲ್ಲಿ ತೊಡಗಿಸಿಕೊಳ್ಳುವ ಆಯ್ಕೆಯನ್ನು ಕೊಟ್ಟಿರುತ್ತೇನೆ.

ತಮಿಳುನಾಡಿನ ಶಾಲೆಯೊಂದರಲ್ಲಿ ಮಾಡಿದ ಅಂತಹ ಒಂದು ಪ್ರಯತ್ನದಲ್ಲಿ ನಾಲ್ಕನೇ ತರಗತಿಯ ಮಕ್ಕಳು ಆಹಾರ ಮತ್ತು ಪೌಷ್ಟಿಕತೆ ಕುರಿತು ಪದ್ಯಗಳನ್ನು ಬರೆದು ಶಾಲೆಯ ಕ್ಯಾಂಟೀನ್‌ನಲ್ಲಿ ಪ್ರದರ್ಶಿಸಿದರು. ಒಬ್ಬ ಹೊಳಹುಗಳನ್ನು ಕೊಟ್ಟರೆ ಮತ್ತೊಬ್ಬ ಚಿತ್ರ ಬರೆದ, ಮೂರನೆಯವನು ಪದ್ಯ ರಚಿಸಿದರೆ, ಮಗದೊಬ್ಬ ಆ ಪದ್ಯವನ್ನು ಬರೆದ. ಹೀಗೆ ಒಂದು ಗುಂಪಿನಲ್ಲಿ ಅವರೆಲ್ಲರೂ ಸಕ್ರಿಯರಾದರು. ಪ್ರತಿಯೊಬ್ಬರ ಕಾರ್ಯವೂ ಪ್ರತಿ ಚಟುವಟಿಕೆಯಲ್ಲೂ ಬದಲಾಗುತ್ತಿರುತ್ತದೆ. ಉದಾಹರಣೆಗೆ, ಪ್ರವೇಶದ್ವಾರಕ್ಕೆ ಸ್ವಾಗತ ಸಂದೇಶ ಬರೆಯುವ ಚಟುವಟಿಕೆ. ಈ ಪ್ರಕ್ರಿಯೆಯ ಮೂಲಕ, ಅವಧಿ ಮುಗಿಯುವ ಹೊತ್ತಿಗೆ ಎಲ್ಲಾ ಮಕ್ಕಳೂ ಶಾಲಾ ಕ್ಯಾಂಟೀನ್‌ಗೋ, ಉದ್ಯಾನಕ್ಕೋ, ಪ್ರವೇಶದ್ವಾರಕ್ಕೋ ಒಟ್ಟಿನಲ್ಲಿ ಒಂದು ಪದ್ಯ ಬರೆದಿದ್ದರು.

ನಾಲ್ಕನೇ ತರಗತಿಯಲ್ಲಿ ನಾವು ಸೌರ ವ್ಯವಸ್ಥೆಯ (All about the Solar System) ಬಗ್ಗೆ ಸಮಗ್ರ ಪುಸ್ತಕವೊಂದನ್ನು ರಚಿಸಿದೆವು. ಪ್ರತಿ ಮಗುವೂ ತನಗಿಷ್ಟದ ಬರಹ ವಿಷಯವನ್ನು ಆರಿಸಿಕೊಳ್ಳ-ಬಹುದಾಗಿತ್ತು. ಕೆಲವು ಮಕ್ಕಳು ವಾಸ್ತವಾಂಶಗಳನ್ನು ಆರಿಸಿದರೆ, ಇನ್ನು ಕೆಲವರು ನಿರೂಪಣೆ, ಮತ್ತೆ ಕೆಲವರು ಕಾಲ್ಪನಿಕ ಕತೆಯನ್ನು ಬರೆದರು. ಒಂದು ಮಗು ಪೀಠಿಕೆಯನ್ನು ಬರೆಯಿತು, ಬರೆಯಲು ನಿರಾಕರಿಸುತ್ತಿದ್ದ ಕೆಲ ಮಕ್ಕಳು ಚಿತ್ರಗಳನ್ನು ರಚಿಸಿದರು, ಇನ್ನು ಕೆಲವರು ಅವನ್ನು ಅಂಟಿಸಿದರು. ಒಬ್ಬಾತ ಶೀರ್ಷಿಕೆ ಮತ್ತು ಸಾರಾಂಶ ಬರೆದನು. ಹೀಗೆ, ಪ್ರತಿ ಮಗುವೂ ಕಲಿಕೆಯ ಪ್ರಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಂಡು, ತನ್ನದೇ ಮಟ್ಟದಲ್ಲಿ ಅವನ/ಅವಳ ಬರವಣಿಗೆಯ ಕೆಲವು ಕೌಶಲವನ್ನೂ ತೋರಿಸಿಕೊಟ್ಟಿತು. ಆದರೆ, ಸಂಘಟಿತ ಪ್ರಯತ್ನದ ಫಲವಾಗಿ ಬಂದ ಅಂತಿಮ ಫಲಿತಾಂಶವು (ಉತ್ಪನ್ನ) ಕಲಿಕಾ ಪ್ರಕ್ರಿಯೆಯಲ್ಲಿ ಪ್ರತಿ ಮಗುವಿನ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿತು. ಅಲ್ಲದೆ, ಅವನಿಗೆ/ಅವಳಿಗೆ 'ಅಸಾಧ್ಯ' ಎನ್ನುವುದರ ಬದಲಿಗೆ 'ಸಾಧ್ಯ' ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿತು.

ಸುಲಭ ಆಸನ ವ್ಯವಸ್ಥೆ

ಕೆಲವೊಮ್ಮೆ ತರಗತಿ ಕೊಠಡಿಯಲ್ಲಿ ಮಕ್ಕಳು ಕುಳಿತುಕೊಳ್ಳುವ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವುದರಿಂದ ಪ್ರತಿ ಮಕ್ಕಳೂ ಕಲಿಯುತ್ತಿದ್ದಾರೆ ಎಂಬುದನ್ನು ಶಿಕ್ಷಕರು ದೃಢ–ಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ವೃತ್ತಾಕಾರದಲ್ಲಿ ಕುಳಿತು–ಕೊಳ್ಳುವುದರಿಂದ ಎಲ್ಲಾ ಮಕ್ಕಳು ಶಿಕ್ಷಕರನ್ನಷ್ಟೇ ಅಲ್ಲದೆ ಪರಸ್ಪರ ತಮ್ಮನ್ನೂ ನೋಡಿಕೊಳ್ಳಲೂ ಸಾಧ್ಯವಾಗುತ್ತದೆ. ಹೀಗೆ ಒಬ್ಬರನ್ನೊಬ್ಬರು ನೋಡಿಕೊಳ್ಳುವ ಸರಳ ಕ್ರಿಯೆಯಿಂದ ಮುಂದಿನ ದಿನಗಳಲ್ಲಿ ಪರಸ್ಪರ ಸಮನ್ವಯ ಮತ್ತು ಪಾಲ್ಗೊಳ್ಳುವಿಕೆಯೂ ಸಾಧ್ಯವಾಗುತ್ತದೆ. ಕತೆ ಹೇಳುವ ಅವಧಿಯಲ್ಲಿ ನಾನು ಮಕ್ಕಳನ್ನು ಒಂದೆಡೆ ಕಲೆಹಾಕಿ ಕೂರಿಸುವ ಪ್ರಯತ್ನ ಮಾಡಿದ್ದಿದೆ. ಹೀಗೆ ಒಟ್ಟುಗೂಡಿ ಕೂರುವುದರಿಂದ ಮಕ್ಕಳ ಮನಸ್ಸಿನಲ್ಲಿ ತಾವು ಯಾವುದೋ ಮುಖ್ಯವಾದ ಕೆಲಸದ ಭಾಗವಾಗಿದ್ದೇವೆ, ರಹಸ್ಯ ಚಟುವಟಿಕೆ ಮಾಡುತ್ತಿದ್ದೇವೆ ಎಂಬ ಭಾವನೆ ಬರುತ್ತದೆ. ಮುಖ್ಯವಾಗಿ, ತಂಟೆಕೋರ ಮತ್ತು ಅಲ್ಲಿ ಇಲ್ಲಿ ಅಲೆದಾಡುವ ಮಕ್ಕಳನ್ನೂ ಹಿಡಿದಿಡಲು ಇದು ನೆರವಾಗುತ್ತದೆ. ಗುಂಪಾಗಿ ಕೂರುವುದರಿಂದ ಮಕ್ಕಳಲ್ಲಿ ಯಜಮಾನಿಕೆ ಮತ್ತು ತಂಡದ ಉತ್ಸಾಹ ಬರುವುದನ್ನು ನಾನು ಗಮನಿಸಿದ್ದೇನೆ. ಇದರಿಂದ, ಕಡಿಮೆ ಪ್ರೇರೇಪಣೆ ಇರುವ ಮಕ್ಕಳೂ ಕ್ರಿಯಾಶೀಲರಾಗಿ ಕಲಿಕೆಯ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಅವಕಾಶ ಸಿಗುತ್ತದೆ. ಪಾಲ್ಗೊಳ್ಳುವಿಕೆಯ ನೆಲೆಯನ್ನು ಹೊರತುಪಡಿಸಿಯೂ, ಗುಂಪಾಗಿ ಕುಳಿತುಕೊಳ್ಳುವ ಅಭ್ಯಾಸದಿಂದಾಗಿ ತರಗತಿಯ ಅವಧಿಯಲ್ಲಿ ಮಾಡಬೇಕಾಗಿದ್ದ ಕೆಲವು ವಿನ್ಯಾಸ ಮತ್ತು ಹಣೆಪಟ್ಟಿಗಳಿಂದ ನಾನು ತಪ್ಪಿಸಿಕೊಂಡೆ. ನಿಗದಿತ ಆಸನ ಮತ್ತು ಶೈಲಿಯಲ್ಲಿ ಬದಲಾವಣೆ ಮಾಡಿದ್ದರಿಂದ ಮಕ್ಕಳ ಮುಖದಲ್ಲಿ ಸಂಪೂರ್ಣವಾಗಿ ಹೊಸ ಬೆಳಕನ್ನು ನಾನು ಕಂಡೆ. ಇದು ಸಿದ್ಧಮಾದರಿಯ ಸರಪಳಿಯೊಂದನ್ನು ತುಂಡರಿಸಿತು ಎಂದುಕೊಂಡಿದ್ದೇನೆ. ಅಚ್ಚರಿಯ ಸಂಗತಿ ಎಂದರೆ, ಲಿಂಗ, ಕೊನೆಯ ಬೆಂಚಿನ ಗುಂಪು ಎಂಬಿತ್ಯಾದಿ ಗಡಿರೇಖೆಗಳನ್ನೂ ಇದು ಮುರಿದಿತ್ತು.

ಪಠ್ಯದ ಜೊತೆಗೆ ವೈಯಕ್ತಿಕ ನಂಟು ಸ್ಥಾಪನೆ

'ಪ್ರತಿ ಮಗುವೂ ಒಂದು ಸನ್ನಿವೇಶ'ವೆಂಬಂತೆ (Every child is a context) ಪರಿಗಣಿಸಬೇಕು ಎಂದು ನಾನು ಪ್ರಸ್ತುತ ಕೆಲಸ ಮಾಡುತ್ತಿರುವ ಶಾಲೆಯ ಸಂಸ್ಥಾಪಕರು ಇತ್ತೀಚೆಗೆ ನೆನಪಿಸಿದ್ದರು. ಈ ಮಾತು ಸಂಪೂರ್ಣ ನಿಜ ಎಂದು ನಾನೂ ಅಂದುಕೊಳ್ಳುತ್ತೇನೆ. ಶಿಕ್ಷಣ ವ್ಯವಸ್ಥೆಯು ಪ್ರತಿಯೊಂದು ಸನ್ನಿವೇಶಕ್ಕೂ ಜವಾಬ್ದಾರಿ ವಹಿಸಲು ಸಾಧ್ಯವಿಲ್ಲ ಎಂಬುದು ಅಷ್ಟೇ ನಿಜ. ಸ್ಥಳೀಯ ಸನ್ನಿವೇಶಗಳ ಹೊಣೆ ಹೊರುವುದು, ಪಠ್ಯ ಮತ್ತು ಸಂಪನ್ಮೂಲ ಸಿದ್ಧಪಡಿಸುವಲ್ಲಿ ಪರಿಹರಿಸಲಾಗದ ಸವಾಲುಗಳೂ ದೊಡ್ಡದಾಗಿ ಪರಿಣಮಿಸುತ್ತದೆ. ಅಂತಹ ಸಂದರ್ಭದಲ್ಲಿ, ಒಂದು ವ್ಯವಸ್ಥೆಯು ಪ್ರತಿ ಮಗುವಿಗೂ ಹೊಣೆ ಹೊರುತ್ತದೆ ಎಂದಾದರೆ ಅದು ಶಿಕ್ಷಣ ವ್ಯವಸ್ಥೆಯಲ್ಲಿನ ದೊಡ್ಡ ದಂತಕತೆಯಾಗುತ್ತದೆ!

ಆದರೂ, ಬೋಧನೆಯ ದೈನಂದಿನ ಕೆಲಸದಲ್ಲಿ ಇದೆಲ್ಲ ಅಷ್ಟು ಅಸಾಧ್ಯವಾದವು ಎಂಬಂತೆ ಕಾಣುವುದಿಲ್ಲ. ವೈಯಕ್ತಿಕ ಕತೆಗಳು, ಇತಿಹಾಸ, ಒಗಟುಗಳು, ಆಸಕ್ತಿಗಳು ಮುಂತಾದ ತರಗತಿ ಕೊಠಡಿಯಲ್ಲಿ ಯಾವುದನ್ನಾದರೂ ಒಳಗೊಳ್ಳುವಂಥ ಮಾರ್ಗಗಳ ನೆಲೆಯಲ್ಲಿ ಯೋಚಿಸಲು ಪ್ರಯತ್ನಿಸುವುದು ಮತ್ತು ಪ್ರತಿ ಮಗುವೂ ಕಲಿಯುತ್ತಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ದೀರ್ಘ ಕಾಲ ಬೇಕಾಗುತ್ತದೆ. ಹಾಗಾಗಿ ಇದೊಂದು ದೊಡ್ಡ ಸವಾಲು. ಈ ನಿಟ್ಟಿನಲ್ಲಿ ನಾನು ಪ್ರಯತ್ನಿಸಿದಾಗಿನ ಕೆಲವೊಂದು ಸ್ವಾರಸ್ಯಕರ ಅನುಭವಗಳು ನನಗೆ ಇನ್ನೂ ನೆನಪಿನಲ್ಲಿವೆ.

ಶಾಲೆಯ ಹೊರಗೆ ಹಮ್ಮಿಕೊಂಡ ಶೈಕ್ಷಣಿಕ ನಾಟಕ (Edu-drama) ಅವುಗಳಲ್ಲಿ ಒಂದು. ಒಂದು ಮಗು (ಕೆ ಎಂದುಕೊಳ್ಳಿ) ನಾಟಕದಲ್ಲಿ ಭಾಗವಹಿಸುವುದೇ ಇಲ್ಲ ಎಂದು ಗೋಡೆಗೆ ಮುಖ ಮಾಡಿಕೊಂಡು ನಿಲ್ಲುತ್ತಿತ್ತು.

ನಾವು, ಪ್ರತಿ ಮಗುವೂ ಗೋಡೆಗೆ ಎದುರಾಗಿ ನಿಂತು, ಅವನ/ಅವಳ ದಿನನಿತ್ಯ ಗೋಡೆಯ ಜೊತೆಗೆ ಮಾತನಾಡುವಂಥ ಉತ್ತೇಜಕ ಚಟುವಟಿಕೆಯನ್ನು ಮಾಡಿದೆವು. ಆ ನಂತರ ಎಲ್ಲರೂ ವೃತ್ತಾಕಾರವಾಗಿ ಕುಳಿತುಕೊಂಡ ಬಳಿಕವೇ ನಾವು ತರಗತಿ ಆರಂಭಿಸುತ್ತೇವೆ. ಆದ್ದರಿಂದ 'ಕೆ'ಯ ವರ್ತನೆ ಎಲ್ಲರಂತೆ ಸಾಮಾನ್ಯವಾಗಿದ್ದು, ಸ್ವೀಕಾರಾರ್ಹವಾಗಿ, ಎಲ್ಲರೊಂದಿಗೆ ಬೆರೆತು ಖುಷಿಯಾಗಿರತೊಡಗಿದನು. ಇದು ಮೊದಲ ಹಂತವಾಗಿತ್ತು. ಎರಡನೆಯ ಹಂತವಾಗಿ, ನಾನು ಈ ಕೆಲಸದಲ್ಲಿ ಆ ಮಗುವಿಗೆ ಯಾವುದೇ ಬಲವಂತ ಮಾಡಲಿಲ್ಲ, ಅವನನ್ನು ಅವಮಾನಿಸಲಿಲ್ಲ ಅಥವಾ ನಿರ್ಲಕ್ಷಿಸಲಿಲ್ಲ ಅಥವಾ ಕಡೆಗಣಿಸಲಿಲ್ಲ.

ಕ್ರಮೇಣ ನಾವು ಅವನನ್ನು ನಂಬುತ್ತೇವೆ ಎಂದು ಅರ್ಥವಾಗಿ ಅವನೂ ಆ ವಾತಾವರಣವನ್ನು ನೆಚ್ಚಿಕೊಳ್ಳತೊಡಗಿದ. ನಿಧಾನವಾಗಿ ಮುಖ್ಯ ಪಾತ್ರದ ಭಾಗವಾಗಲು ಅವನು ಇಚ್ಛಿಸಿದ. ಇದೇ ಸಂದರ್ಭದಲ್ಲಿ ಗೋಡೆಯ ಜೊತೆ ಮಾತನಾಡುವ ಚಟುವಟಿಕೆಯನ್ನು ನಾವು ಕೈಬಿಟ್ಟು ಇತರ ಚಟುವಟಿಕೆ / ಕಾರ್ಯತಂತ್ರಗಳನ್ನು ಕೈಗೆತ್ತಿಕೊಂಡೆವು.

ಮತ್ತೊಂದು ಅನುಭವ ಆರನೇ ತರಗತಿಯಲ್ಲಿ ಸಮಾಜವಿಜ್ಞಾನ ತರಗತಿಯಲ್ಲಿ ಪಾಲ್ಗೊಳ್ಳಲು ನಿರಾಕರಿಸುತ್ತಿದ್ದ ಹುಡುಗನೊಬ್ಬನ ಬಗೆಗಿನದು. ತರಗತಿ ಮುಗಿದ ಬಳಿಕ, ಅವನ ಆಸಕ್ತಿಗಳು ಮತ್ತು ಬದುಕಿನ ಬಗ್ಗೆ ಅವನ ಜೊತೆ ಮಾತನಾಡಲಾರಂಭಿಸಿದೆ. ಅವನಿಗೆ ಕಲ್ಲುಗಳನ್ನು ಸಂಗ್ರಹಿಸುವುದೆಂದರೆ ಇಷ್ಟ ಎಂದು ಗೊತ್ತಾಯಿತು. ಹಾಗಾಗಿ ಶಿಲಾಯುಗದ ಬಗ್ಗೆ ಮಾತನಾಡಲು ನಾವು ಶುರು ಮಾಡಿದೆವು, ಅಲ್ಲದೆ, ಶಿಲಾಯುಗದವನೆಂದು ಕಲ್ಪಿಸಿಕೊಳ್ಳಲು ಹೇಳಿ, ಅವನ ಸಂಗ್ರಹದಲ್ಲಿರುವ ಕಲ್ಲುಗಳಿಂದ ಯಾವ ಬಗೆಯ ಆಯುಧಗಳನ್ನು ತಯಾರಿಸಬಹುದು ಎಂದು ಅಂದಾಜಿಸಿದೆವು. ಅವನನ್ನು ಉತ್ತೇಜಿಸಲು ಒಂದು ಆರಂಭಿಕ ಅಂಶವಾಗಿ ಈ ಚಟುವಟಿಕೆ ಬಳಕೆಯಾಯಿತು. ಪಠ್ಯವಿಷಯವನ್ನು ಆತನ ಖಾಸಗಿ ಬದುಕಿನ ಜೊತೆಗೆ ಹೇಗೆ ಸಮೀಕರಿಸಬಹುದು ಎಂಬುದನ್ನು ನೀಡಲು ಕೂಡಾ ಇದು ನೆರವಾಯಿತು.

ಹಾಗಂತ, ಇಂತಹ ನಡೆಗಳು ಅವುಗಳದ್ದೇ ಆದ ಸಮಸ್ಯೆಗಳಿಂದ ಮುಕ್ತವಾಗಿರುತ್ತವೆ ಎಂದೇನೂ ಅಲ್ಲ. ಅಲ್ಲದೆ, ಸಾಮಾನ್ಯವಾಗಿ ಪ್ರತಿಯೊಂದು ಮಗುವಿನೊಂದಿಗೆ ಹೀಗೆ ಕಳೆಯಲು ಸಮಯ ಮತ್ತು ಅವಕಾಶ ಇರುವುದಿಲ್ಲ. ಬಹುತೇಕ ಸಂದರ್ಭಗಳಲ್ಲಿ, ಹೀಗೆ ಒಳಗೊಳ್ಳುವುದಕ್ಕೆ ಬೇಕಾದ ಹೊಂದಾಣಿಕೆ ಮತ್ತು ಸ್ವಾಯತ್ತತೆ ಇರುವುದಿಲ್ಲ.

ಮಕ್ಕಳೊಂದಿಗೆ ಆಟದ ವೇಳೆ, ಬಸ್‌ಗೆ ಕಾಯುವಾಗ, ಬಸ್‌ನೊಳಗೆ ಹೀಗೆ ಅವಕಾಶ ಸಿಕ್ಕಾಗಲೆಲ್ಲಾ ಅವರ ಬದುಕು ಮತ್ತು ಸನ್ನಿವೇಶದ ಬಗ್ಗೆ ತಿಳಿದುಕೊಳ್ಳುವುದು, ಆ ಮೂಲಕ ಬೋಧನೆ, ಅಭ್ಯಾಸದ ಬಗ್ಗೆ ಮಾರ್ಗದರ್ಶನ ಕೊಡಬಹುದು, ಅಲ್ಲದೆ ಮಕ್ಕಳ ಜೊತೆಗೆ ಶಿಕ್ಷಕರು

ಹೆಚ್ಚು ಮಾತನಾಡಬಹುದು. ಇದು ಜಟಿಲವಾದರೂ, ಮಕ್ಕಳ ಬದುಕಿನ ವಾಸ್ತವಗಳು ಅವರನ್ನು ಕಲಿಕೆ ಮತ್ತು ಪಠ್ಯದಲ್ಲಿ ಒಳಗೊಳ್ಳುವಂತೆ ಮಾಡುವ ಪ್ರಕ್ರಿಯೆಯಲ್ಲಿ ನೆರವಾಗುತ್ತದೆ. ನಾನು ಮಕ್ಕಳ ಬದುಕಿನ ಸ್ವಾರಸ್ಯ ಮತ್ತು ಅನುಭವಗಳನ್ನೇ ಉದಾಹರಣೆಯಾಗಿ ತರಗತಿಯಲ್ಲಿ ಪ್ರಸ್ತಾಪಿಸುತ್ತೇನೆ. ಪಠ್ಯ ಓದುವ ಅವಧಿಯಲ್ಲಿನ ವರ್ಕ್‌ಶೀಟ್ ಮತ್ತು ಮೌಲ್ಯಮಾಪನಕ್ಕೆ ಮಕ್ಕಳ ಜೀವನಾನುಭವಗಳ ವಿವರಗಳನ್ನು ನಾನು ಬಳಸಿಕೊಳ್ಳುತ್ತಿದ್ದೆ.

ನಾನು ಜಾರಿಗೊಳಿಸಿದ್ದ, ಪಾಲಿಸಿದ್ದ ಕೆಲವು ಪರಿಣಾಮಕಾರಿ ಅಭ್ಯಾಸಗಳ ಮೇಲಷ್ಟೇ ಬೆಳಕು ಚೆಲ್ಲಿದ್ದೇನೆ. ಅವುಗಳಲ್ಲಿಯೂ ತಮ್ಮದೇ ಆದ ಸವಾಲುಗಳು ಹಾಗೂ ಕಾರ್ಯಗತಗೊಳಿಸಲಾಗದ ಸಮಸ್ಯೆಗಳಿರುತ್ತವೆ. ಆದರೆ ಅಂತಿಮವಾಗಿ, ಪ್ರತಿ ಮಗುವೂ ಕಲಿಯಬಲ್ಲುದೋ ಇಲ್ಲವೋ ಎಂಬುದು ಹಿರಿಯರು ಹೊಂದಿರುವ (ಪೋಷಕರು, ಶಿಕ್ಷಕರು, ಶಾಲಾ ಪ್ರಾಂಶುಪಾಲರು, ಪಠ್ಯಪುಸ್ತಕದ ಲೇಖಕರು ಅಥವಾ ಇತರ ಯಾವುದೇ ಭಾಗೀದಾರರು) ಅವನ/ಅವಳ ಮಗು ಕಲಿಯಬಲ್ಲುದು ಎಂಬ ನಂಬಿಕೆಯನ್ನು ಅವಲಂಬಿಸಿರುತ್ತದೆ. ಇದು ವೈಯಕ್ತಿಕ ಅಥವಾ ಭಾವನಾತ್ಮಕ ನಂಬಿಕೆ ಎಂದೇನೂ ನಾನು ಹೇಳುತ್ತಿಲ್ಲ. ಆದರೆ ಪ್ರತಿ ಮಗುವೂ ಕಲಿಯಬಲ್ಲದು ಮತ್ತು ಪ್ರತಿಯೊಂದನ್ನೂ ಕಲಿಯಬಲ್ಲದು ಎಂಬ ಮಾಹಿತಿಪೂರ್ಣ, ಪರೀಕ್ಷಿಸಿದ ನಂಬಿಕೆಯ ವಿಚಾರದ ಅನ್ವಯ ಹೇಳಿದ್ದೇನೆ. ಕಲಿಕೆಯ ತಿರುವು ಭಿನ್ನವಾದೀತಾದರೂ ಕಲಿಕೆ ಮಾತ್ರ ಸಾಧ್ಯವಾಗುತ್ತದೆ.

ನಾನು ಪ್ರಸ್ತಾಪಿಸಿದಂತೆ, ಹಲವು ರೀತಿಯಲ್ಲಿ ಕೆಲವು ಮಕ್ಕಳ ವಿಚಾರದಲ್ಲಿ ವ್ಯವಸ್ಥೆ ಸೋಲುತ್ತದೆ ಮತ್ತು ಆ ಮಕ್ಕಳು ಕಲಿಯುವುದಿಲ್ಲ. ಈ ಸೋಲನ್ನು ಕಲಿಕೆಯಲ್ಲಿನ ಅಸಾಮರ್ಥ್ಯದ ಜೊತೆ ಸುಲಭವಾಗಿ ಸಮೀಕರಿಸಬಹುದು. ಎಲ್ಲಿಯವರೆಗೆ ಈ ರೀತಿಯ ತಪ್ಪು ನಿರ್ಣಯವನ್ನು ನಾವು ಗಮನಿಸಲು ಸಾಧ್ಯವೋ ಮತ್ತು ಸೂಕ್ತ ಸನ್ನಿವೇಶ, ಪರಿಸ್ಥಿತಿ ಮತ್ತು ಪ್ರಕ್ರಿಯೆಯನ್ನು ಒದಗಿಸಿದಲ್ಲಿ ಪ್ರತಿ ಮಗುವೂ ಕಲಿಯಬಲ್ಲದು ಎಂದು ನಂಬುತ್ತೇವೋ ಅಲ್ಲಿಯವರೆಗೂ ಪ್ರತಿ ಮಗುವಿಗೂ ಕಲಿಕೆಯನ್ನು ಖಾತರಿಪಡಿಸುವಂತಹ ತರಗತಿಯನ್ನು ನಿರ್ಮಿಸುವ ಮಾರ್ಗಗಳನ್ನು ನಾವು ಕಂಡುಕೊಳ್ಳುತ್ತಲೇ ಇರುತ್ತೇವೆ.



ಪೂರ್ವಾ ಅಗರ್‌ವಾಲ್, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿನಿ ಮತ್ತು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಶಿಕ್ಷಣದ ಕುರಿತ ಅವರ ಶಿಕ್ಷಣದಿಂದಾಗಿ ಶಿಕ್ಷಣಶಾಸ್ತ್ರಜ್ಞೆಯಾಗುವ ಆಸೆಯ ಬೇರುಗಳನ್ನು ಗಟ್ಟಿಗೊಳಿಸಿತು. ಪ್ರಸ್ತುತ ಅವರು ಬೆಂಗಳೂರಿನ ಸ್ಪಾರ್ಕಿಂಗ್ ಮೈಂಡ್ಸ್ ಗ್ಲೋಬಲ್ ಸ್ಕೂಲ್‌ನಲ್ಲಿ (Sparkling Mindz Global School) ಕಾರ್ಯನಿರ್ವಹಿಸುತ್ತಿದ್ದು, ಇಬ್ಬರು ಮಕ್ಕಳ ಜೊತೆಗೆ ಜೀವನ ಸಾಗಿಸುತ್ತಿದ್ದಾರೆ. ಸ್ವತಂತ್ರವಾಗಿ ಓದುಗರು ಮತ್ತು ಬರಹಗಾರರು ಹೊರಹೊಮ್ಮುವಂತಹ ಪ್ರಕ್ರಿಯೆಗೆ ಅವಕಾಶ ನೀಡುವುದು ಅವರಿಗೆ ಇಷ್ಟ. ಅವರು ಮಕ್ಕಳ ಪುಸ್ತಕಗಳನ್ನೂ ಬರೆದಿದ್ದಾರೆ. ಅವರ ಮೊದಲ ಕೃತಿ 'ವ್ಹಾಟ್ ಮೇಕ್ಸ್ ಮಿ' (What Makes Me) ಯನ್ನು ತುಲಿಕಾ ಬುಕ್ಸ್ ಇತ್ತೀಚೆಗೆ ಪ್ರಕಟಿಸಿದೆ. ಪೂರ್ವಾ ಅಗರ್‌ವಾಲ್ ಅವರನ್ನು poorva.agarwal@apu.edu.in ಇಲ್ಲಿ ಸಂಪರ್ಕಿಸಬಹುದು.

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**